**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:-ಕರ್ನಾಟಕ ತೆರೆದ ದತ್ತಾಂಶ ಕತೃತ್ವ (Karnataka Open Data Initiative)ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

**ಓದಲಾಗಿದೆ:**

1. 2018-19 ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಯವರ ಆಯವ್ಯಯ ಭಾಷಣ ಕಂಡಿಕೆ 385
2. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಇ-ಆಡಳಿತ ಕೇಂದ್ರ ಇವರ ಪತ್ರ ಸಂಖ್ಯೆ: CEG-2001/48/2019/CEG- ADMIN-CEG/5, ದಿನಾಂಕ:04.07.2019

**ಪೀಠಿಕೆ:**

2018-19 ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಯವರ ಆಯವ್ಯಯ ಭಾಷಣ ಕಂಡಿಕೆ 385 ರಲ್ಲಿ ಈ ಕೆಳಕಂಡಂತೆ ಘೋಷಿಸಿದೆ.

> "385 ಕರ್ನಾಟಕ ಜ್ಞಾನ ಆಯೋಗದ ಶಿಫಾರಸ್ಸುಗಳನ್ನು ಮೂರು ವರ್ಷದೊಳಗೆ ಕರ್ನಾಟಕದಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಮುಕ್ತವಾಗಿ ದತ್ತಾಂಶ / ಮಾಹಿತಿ ಒದಗಿಸುವ Karnataka Open Data Initiative (K-ODI) ವ್ಯವಸ್ಥೆಯನ್ನು ರೂಪಿಸಲಾಗುವುದು. ಇದಕ್ಕಾಗಿ ರೂ. 5 ಕೋಟಿ ಗಳನ್ನು ಮೀಸಲಿಡಲಾಗುವುದು".

ಸರ್ಕಾರದ ಅನೇಕ ಇಲಾಖೆಗಳು ಮಾಹಿತಿ ತಂತ್ರಜ್ಞಾನ (ಐಟಿ) ಗಳ ಪರಿಹಾರಗಳನ್ನು ಒದಗಿಸುವ ಹಾದಿಯಲ್ಲಿ ವಿವಿಧ ದತ್ತಾಂಶ ಸಮುಚ್ಚಯಗಳನ್ನು ಉತ್ಪಾದಿಸುತ್ತಿದೆ. ಉದಾಹರಣೆಗೆ, ಶಿಕ್ಷಣ ಇಲಾಖೆಯು ತಮ್ಮ ಮಾಹಿತಿ ತಂತ್ರಜ್ಞಾನ (ಐಟಿ) ಪರಿಹಾರಗಳಲ್ಲಿ ಶಾಲಾ ದತ್ತಾಂಶ ಸಮುಚ್ಚಯ ಮತ್ತು ವಿಧ್ಯಾರ್ಥಿ ದತ್ತಾಂಶ ಸಮುಚ್ಚಯ ಇತ್ಯಾದಿಗಳನ್ನು ಹೊಂದಿದೆ. ಈ ರೀತಿ ಸೃಜಿಸಿದ / ಕಾಲಕಾಲಕ್ಕೆ ಮಾರ್ಪಡಿಸಿದ ದತ್ತಾಂಶ ಸಮುಚ್ಚಯಗಳು ಆಯಾ ಇಲಾಖೆಗಳ ಮಾಹಿತಿ ತಂತ್ರಜ್ಞಾನ (ಐಟಿ) ಪರಿಹಾರಗಳ ಚೌಕಟ್ಟಿಗೆ ಸೀಮಿತವಾಗಿರುತ್ತವೆ.

ಈ ದತ್ತಾಂಶ ಸಮುಚ್ಚಯಗಳು ಅಗಾಧ ಸಾಮರ್ಥ್ಯವನ್ನು ಹೊಂದಿದ್ದು ಅವುಗಳಿಂದ ವಿಭಿನ್ನ ರೀತಿಯ ಲಾಭವನ್ನು ಸರ್ಕಾರದ/ಸರ್ಕಾರೇತರ ವಿವಿಧ ಆಸಕ್ತರು ಪಡೆಯುವರು. ಮೇಲೆ ತಿಳಿಸಿದ ಅಭಿಪ್ರಾಯದಿಂದಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯ ಅಧೀನ ಸಂಸ್ಥೆಯಾದ ಇ-ಆಡಳಿತ ಕೇಂದ್ರವು ದತ್ತಾಂಶದ ವೇದಿಕೆಯನ್ನು ಸೃಜಿಸಲು ಉದ್ದೇಶಿಸಿದೆ. ದತ್ತಾಂಶವನ್ನು ಅಡಚಣೆಯಿಲ್ಲದೆ ಉಪಯೋಗಿಸುವ / ಮರು ಉಪಯೋಗಿಸುವ ಮತ್ತು ಯಾರಿಗಾದರೂ ಮರು ವಿತರಿಸುವ ದತ್ತಾಂಶವೆಂದು ವಿವರಿಸಲಾಗಿದೆ.

ವಿವಿಧ ಸರ್ಕಾರಿ ಇಲಾಖೆಗಳಾದ ಆಹಾರ ಮತ್ತು ನಾಗರಿಕ ಸರಬರಾಜು , ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಕೃಷಿ ಇತ್ಯಾದಿಗಳು ಬೇರೆ ಬೇರೆ ಗುಣಲಕ್ಷಣಗಳನ್ನು ಹೊಂದಿರುವ ಪ್ರತ್ಯೇಕ ದತ್ತಾಂಶ ಸಮ್ಮುಚ್ಚಯಗಳನ್ನು ಸೃಜಿಸುತ್ತದೆ. ಸದರಿ ದತ್ತಾಂಶಗಳಲ್ಲಿರುವ ವೈಯಕ್ತಿಕ ಅಥವಾ ಗೌಪ್ಯ ಮಾಹಿತಿಗಳನ್ನು ಹೊರತುಪಡಿಸಿ ಉಳಿದ ಮಾಹಿತಿಯನ್ನು ತೋರಿಸುತ್ತದೆ . ಇಂತಹ ದತ್ತಾಂಶದ ಅವಯುವಗಳನ್ನು ಮರೆ ಮಾಡುವ ಅಥವಾ ತಡೆಹಿಡಿಯುವುದರಿಂದ ದತ್ತಾಂಶವನ್ನು ತೆರೆಯದಿರುವಂತೆ ಮಾಡಬಹುದು .

ಸರ್ಕಾರದ ಇಲಾಖೆಗಳು ಬಳಸುತ್ತಿರುವ ದತ್ತಾಂಶ ಸಮುಚ್ಚಯ ಪ್ರಕಟಣೆ, ದಾಖಲೆ, ಸೇವೆಗಳು-

ಸರಕುಗಳನ್ನು ಮತ್ತು ಅವು ಸಂಗ್ರಹಿಸಿರುವ ದತ್ತಾಂಶಗಳನ್ನು ಸಾರ್ವಜನಿಕರ ಬಳಕೆಗೆ ಉಪಯೋಗಿಸಲು ಕೆ.ಓ.ಡಿ.ಐ(Karnataka Open Data Initiative) ಉದ್ದೇಶಿಸಿದೆ. ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಲು ಮತ್ತು ಸರ್ಕಾರದ ಕಾರ್ಯದಲ್ಲಿ ದತ್ತಾಂಶವನ್ನು ನವೀನ ರೂಪದಲ್ಲಿ ಬಳಸಿ ಅದಕ್ಕೆ ವಿವಿಧ ದೃಷ್ಟಿಕೋನ ನೀಡಲು ಅದು ಉದ್ದೇಶಿಸಿದೆ.

ರಾಜ್ಯದ ಮಟ್ಟದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಯ ಅಧೀನ ಸಂಸ್ಥೆಯಾದ ಇ-ಆಡಳಿತ ಕೇಂದ್ರವು ಈ ಯೋಜನೆಯನ್ನು ಜಾರಿಗೊಳಿಸುವ ಸಂಸ್ಥೆಯಾಗಿರುತ್ತದೆ . ಇಲಾಖೆಗಳು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಿಂದ ಸಂಗ್ರಹಿಸಿರುವ ದತ್ತಾಂಶಗಳನ್ನು ಆಸಕ್ತರಿಗೆ ಲಭ್ಯಪಡಿಸಲು ಇ-ಆಡಳಿತ ಕೇಂದ್ರವು, ಉದ್ದೇಶಿಸಿದೆ. ಪ್ರಾರಂಭಿಕವಾಗಿ ಇ-ಆಡಳಿತ ಕೇಂದ್ರವು ಎನ್ ಐ ಸಿ, ನವದೆಹಲಿ, ಅಭಿವೃದ್ಧಿಗೊಳಿಸಿ ನಿರ್ವಹಿಸುತ್ತಿರುವ ಸರ್ಕಾರದ ತೆರೆದ ದತ್ತಾಂಶ ವೇದಿಕೆಯನ್ನು ಉಪಯೋಗಿಸಿಕೊಳ್ಳುತ್ತದೆ.

ಕರ್ನಾಟಕ ತೆರೆದ ದತ್ತಾಂಶ ವೇದಿಕೆಯು ಕೆಳಗೆ ವಿವರಿಸಿರುವ 4(ನಾಲ್ಕು) ಪ್ರಮುಖ ಮಾಡ್ಯೂಲ್‌ಗಳನ್ನು ಒಳಗೊಂಡಿರುತ್ತದೆ.

- ದತ್ತಾಂಶ ನಿರ್ವಹಣಾ ವ್ಯವಸ್ಥೆ (ಡಿಎಂಎಸ್) ವಿವಿಧ ಸಂಸ್ಥೆಗಳ ದತ್ತಾಂಶ ಕ್ಯಾಟಲಾಗ್ ಗೆ ಅನುಮೋದನೆ ಪ್ರಕ್ರಿಯೆ ನಂತರ ವೆಬ್ ಸೈಟ್ ನ ಮುಖ ಪುಟದಲ್ಲಿ ಅಳವಡಿಸುವುದು.
- ವಿಷಯ ನಿರ್ವಹಣಾ ವ್ಯವಸ್ಥೆ- ಓಜಿಡಿ (Cpen Government Data) ವೇದಿಕೆಯಲ್ಲಿರುವ ವಿವಿಧ ವಿಷಯ ಹಾಗೂ ಕಾರ್ಯಗಳ ನಿರ್ವಹಣೆ ಹಾಗೂ ನವೀಕರಿಸುವುದು.
- ಭೇಟಿ ನೀಡುವವರ ಸಂಬಂಧದ ನಿರ್ವಹಣೆ(ವಿಆರ್‌ಎಂ)- ದತ್ತ ಸಮುಚ್ಚಯಕ್ಕೆ ನಾಗರಿಕರ ಪ್ರತಿಕ್ರಿಯೆಯನ್ನು ಕ್ರೋಢಿಕರಿಸಿ ಹಂಚುವುದು.
- ಸಮುದಾಯ- ನಾಗರಿಕರು ತಮ್ಮ ಸಲಹೆಗಳನ್ನು ಹಂಚಿಕೊಳ್ಳಲು ಹಾಗೂ ಪರಸ್ಪರ ಸಂವಹನ ನಡೆಸಲು ಅನುವು ಮಾಡುವುದು.

ದತ್ತಾಂಶ ಸಂಗ್ರಹಿಸಲು ಈ ಕೆಳಕಂಡ ಉಪಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

- ರಾಜ್ಯ ದತ್ತಾಂಶ ಹಂಚಿಕೆ ಮತ್ತು ಪ್ರವೇಶ ನೀತಿ (ಕೆ.ಡಿ.ಎಸ್.ಎ.ಪಿ )(Karnataka Data Sharing and Access Policy) ಯನ್ನು ರಾಷ್ಟ್ರೀಯ ದತ್ತಾಂಶ ಹಂಚಿಕೆ ಮತ್ತು ಪ್ರವೇಶ ನೀತಿಯನ್ವಯ ಸೃಜಿಸುವುದು.
- ಕರ್ನಾಟಕದ ಓಜಿಡಿ ಪ್ರವರ್ತನೆಗೆ ದತ್ತಾಂಶ ಸಮುಚ್ಚಯಗಳನ್ನು ಒದಗಿಸುವಂತಹ ಪ್ರಮುಖ ಇಲಾಖೆಗಳನ್ನು ಗುರುತಿಸುವುದು.
- ದತ್ತಾಂಶವನ್ನು ಗುರುತಿಸಲು, ಅದರ ನೈಜತೆ, ಹಾಗೂ ಅದರ ಗೌಪ್ಯತತೆಯನ್ನು ಮೇಲ್ವಿಚಾರಣೆ

ಮಾಡಲು ಈ ಕೆಳಕಂಡ ಆಡಳಿತಾತ್ಮಕ ಚೌಕಟ್ಟು ಅನ್ನು ರಚಿಸಲಾಗುವುದು.

ಅ)ಯೋಜನಾ ಕಾರ್ಯನಿರ್ವಹಣಾ ಘಟಕ(ಪಿಎಂಯು) ಕರ್ನಾಟಕ ಸರ್ಕಾರದ ತೆರೆದ ದತ್ತಾಂಶದ ಮೊದಲ ಹೆಜ್ಜೆಯ ಬೆಂಬಲವಾಗಿ ಪಿಎಂಯು ಅನ್ನು ಸೃಜಿಸುವುದು. ಪಿಎಂಯು ಪ್ರತಿ ಇಲಾಖೆಗೆ ಅಗತ್ಯವಾದ ಕಾರ್ಯನಿರ್ವಹಣಾ ಚೌಕಟ್ಟನ್ನು ಸೃಜಿಸಲು ಅನುವು ಮಾಡಿಕೊಡುವುದು.

ಆ) ಪಿಎಂಯು ಕಾರ್ಯನಿರ್ವಹಣಾ ಚಟುವಟಿಕೆಗಳನ್ನು ಯೋಜನಾ ನಿರ್ದೇಶಕರು ನಿರ್ವಹಿಸುವರು.

ಇ) ಮುಖ್ಯ ದತ್ತಾಂಶ ಅಧಿಕಾರಿಗಳು(ಸಿಡಿಓ):- ಇಲಾಖಾಯ ಮಟ್ಟದಲ್ಲಿ ಸಿಡಿಓ ಅಧಿಕಾರಿಯು ಸರ್ಕಾರದ ಒಜಿಡಿ ಉಪ ಕ್ರಮಕ್ಕೆ ದತ್ತಾಂಶ ಕೊಡುಗೆಯ ಮೇಲ್ವಿಚಾರಣೆ ಮಾಡುವರು. ಸಿಡಿಓ ರವರು ದತ್ತಾಂಶ ಸಮುಚ್ಛಯದ ಪಟ್ಟಿ ಅಂದರೆ ಸಕಾರತ್ಮಕ / ನಕಾರಾತ್ಮಕ ಪಟ್ಟಿಗಳನ್ನು ಸೃಜಿಸುವ ಜವಾಬ್ದಾರಿ ಹೊಂದಿರುತ್ತಾರೆ. ಅಲ್ಲದೇ ಸಿಡಿಓ ಗಳು ಕೆಓಜಿಡಿ (Karnataka Open Government Data)ಸಲ್ಲಿಸುತ್ತಾ ದತ್ತಾಂಶವನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಸಹ ಹೊಂದಿರುತ್ತಾರೆ.

ಈ) ಬಳಕೆದಾರರಿಂದ ಬಂದಂತಹ ದತ್ತಾಂಶ ಸಮುಚ್ಛಯ ಕೋರಿಕೆಗಳನ್ನು ನಿರ್ವಹಿಸುವುದು

- ಐಟಿ ಮೂಲ ಭೂತ ಸೌಕರ್ಯವನ್ನು ಸೃಜಿಸುವುದು ಹಾಗೂ ಅದರ ನಿರ್ವಹಣೆಯನ್ನು ವೇದಿಕೆ ಸರಬರಾಜುದಾರರ ಜೊತೆ ಸಮನ್ವಹಿಸುವುದು.
- ಇಲಾಖೆಗಳು ದತ್ತಾಂಶವನ್ನು ಮತ್ತು ದತ್ತಾಂಶ ಪ್ರವೇಶ ಪ್ರಕ್ರಿಯ ಹಂಚಿ ಕೊಳ್ಳಲು ಮಾರ್ಗದರ್ಶನ ನೀಡಲು ಕರ್ನಾಟಕ ದತ್ತಾಂಶ ಹಂಚಿಕೆ ಮತ್ತು ಪ್ರವೇಶ ನೀತಿಯನ್ನು (ಕೆಡಿಎಸ್‌ಎಪಿ) (Karnataka Data Sharing and Acess policy) ರೂಪಿಸಲಾಗುವುದು.

ಪ್ರಥಮವಾಗಿ 10 ಇಲಾಖೆಗಳನ್ನು ಕೆಓಡಿಐ ಜಾರಿಗೆ ಒಳಪಡಿಸಲು ಉದ್ದೇಶಿಸಲಾಗಿದೆ. ಆಯವ್ಯಯ ಭಾಷಣದಲ್ಲಿ ಕೆ.ಓ.ಡಿ.ಐ ಯೋಜನೆಗಾಗಿ ರೂ.5 ಕೋಟಿಗಳನ್ನು ಮೀಸಲಿಡಲಾಗಿದೆ. ಮೊದಲನೆ ವರ್ಷದಲ್ಲಿ (2019-20) ಸದರಿ ಯೋಜನೆಯ ಜಾರಿಗೆ ಅಂದಾಜು ರೂ.73.80 ಲಕ್ಷಗಳನ್ನು ವೇತನ ವೆಚ್ಚಕ್ಕಾಗಿ ಭರಿಸಲಾಗುವುದು ಎಂದು ಮೇಲೆ ಓದಲಾದ (2)ರ ಪತ್ರದ ಮೂಲಕ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ತಿಳಿಸುತ್ತಾ, ಮೇಲ್ಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 194 ಇಜಿವಿ 2019**

**ಬೆಂಗಳೂರು, ದಿನಾಂಕ:14 ನೇ ಆಗಸ್ಟ್ 2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ತೆರೆದ ದತ್ತಾಂಶ ಕರ್ತೃತ್ವ ಯೋಜನೆಯನ್ನು (Karnataka Open Data Initiative) ಅನುಷ್ಠಾನಗೊಳಿಸಲು ಪ್ರಸಕ್ತ ಸಾಲಿನ ಲೆಕ್ಕ ಶೀರ್ಷಿಕೆ 3451-00-090-2-04- ಇ-ಆಡಳಿತ ಯೋಜನೆ 059 ಇತರೆ ವೆಚ್ಚಗಳ ರಡಿ ಲಭ್ಯವಿರುವ ಅನುದಾನದಲ್ಲಿ

ರೂ.73.80 ಲಕ್ಷಗಳನ್ನು (ಎಪ್ಪತ್ಮೂರು ಲಕ್ಷದ ಎಂಬತ್ತು ಸಾವಿರ ರೂಪಾಯಿಗಳು ಮಾತ್ರ) ವೇತನ ವೆಚ್ಚಕ್ಕಾಗಿ ಭರಿಸಲು ಇ-ಆಡಳಿತ ಕೇಂದ್ರಕ್ಕೆ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ; ಆಇ 70 ವೆಚ್ಚ-12/19, ದಿನಾಂಕ 15.07.2019 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್-ಪಿ ಎಫ್ ಓ/30/2019, ದಿನಾಂಕ:17.07.2019 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಶಾಂತಿ)
ಪೀಠಾಧಿಕಾರಿ-2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ).

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ ಎಸ್ ಎಸ್ ಎ) ಆಡಿಟ್ ಭವನ, ಹೊಸ ಕಟ್ಟಡ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ ಆರ್ & ಎಸ್ ಎ) ಆಡಿಟ್ ಭವನ, ಹೊಸ ಕಟ್ಟಡ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (ಎ & ಇ) ಮುಖ್ಯ ಕಟ್ಟಡ. ಬೆಂಗಳೂರು-01
4. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1
5. ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-12) ವಿಧಾನ ಸೌಧ, ಬೆಂಗಳೂರು
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.